

## SMS

ಸಂತಾ : ಪಾಪ.... ನಿನ್ನ ಹೆಂಡತಿಗೆ ಕೆಮ್ಮು ಇದ್ದಂತೆ ಕಾಣುತ್ತೆ. ನಿನ್ನೆ ಗುಡಿಯಲ್ಲಿ ಪೂಜೆ ನಡೆದಾಗ ತುಂಬಾ ಕೆಮ್ಮುತ್ತಿದ್ದಳು. ಎಲ್ಲರೂ ಅವಳನ್ನೇ ನೋಡುತ್ತಿದ್ದರು.

ಬಂತಾ : ತಪ್ಪು ತಿಳಿದುಕೊಂಡಿದ್ದೀ, ನಿಜ ಎಂದರೆ ಅವಳು ನಿನ್ನೆ ಹೊಸ ಸೀರೆ ಉಟ್ಟುಕೊಂಡು ಗುಡಿಗೆ ಬಂದಿದ್ದಳು.

★★★

ಕಾರಿನ ರಿಪೇರಿ ಬಿಲ್ ನೋಡಿ ಡಾಕ್ಟರ್ ಕೋಪೋದ್ರಿಕ್ತರಾಗಿ 'ಎಷ್ಟಯ್ಯಾ ಬಿಲ್ ಮಾಡೋದು? ಡಾಕ್ಟರ್ ಆದ ನಾವು ಕೂಡ ಇಷ್ಟು ಬಿಲ್ ಮಾಡೋಲ್ಲ' ಎಂದು ಆರ್ಭಟಿಸಿದರು. ಮೆಕ್ಯಾನಿಕ್ ಶಾಂತ ಸ್ವರದಲ್ಲಿ, 'ಡಾಕ್ಟರ್, ನೀವು ಒಂದೇ ಮಾಡೆಲ್ ಮೇಲೆ ಸಾವಿರಾರು ವರ್ಷಗಳಿಂದ ಕೆಲಸ ಮಾಡ್ತಾ ಇದ್ದೀರಿ. ನಾವು ವರ್ಷಕ್ಕೊಂದು ಹೊಸ ಮಾಡೆಲ್ ವಿಷಯ ಕಲಿಯಬೇಕಾಗುತ್ತದೆ...' ಎಂದ.

★★★

ರಸ್ತೆಯ ಆ ಬದಿಯಲ್ಲಿ ಚಿಂತಾಕ್ರಾಂತನಾಗಿ ನಿಂತಿದ್ದ ಮುದುಕನನ್ನು ನೋಡಿ, 'ಈ ಜಿಪುಣ ಅಲ್ಲೇನು ಯೋಚಿಸುತ್ತಾ ನಿಂತಿದ್ದಾನೆ?' ಎಂದು ಸಂತಾ ಕೇಳಿದ. ಬಂತಾ, 'ದಾಪುಗಾಲು ಹಾಕಿ ರಸ್ತೆ ದಾಟಿ ಚಪ್ಪಲಿ ಸವೆಸುವುದನ್ನು ಉಳಿಸಬೇಕೋ, ಚಿಕ್ಕ ಚಿಕ್ಕ ಹೆಜ್ಜೆಗಳನ್ನಿಟ್ಟು ಪ್ಯಾಂಟಿನ ಹೊಲಿಗೆ ಹರಿಯದಂತೆ ಕಾಪಾಡಿಕೊಳ್ಳಬೇಕೋ ಎಂಬ ಸಮಸ್ಯೆ ಅವನದಾಗಿದೆ' ಎಂದ.

★★★

ಸಂತಾ : ಅಲ್ಲಯ್ಯಾ... ಯಾವ ಪ್ರಶ್ನೆೇ ಆಗಲಿ ನೀನು ಪ್ರಶ್ನೆಯ ರೂಪದಲ್ಲೇ ಉತ್ತರ ಕೊಡುವುದು ಯಾಕೆ?

ಬಂತಾ: ಯಾಕೆ ಕೊಡಬಾರದು?

■ ರಜನಿ ಟಿ.

